ಏಕೆಂದರೆ ಆತ ತೊಟ್ಟಿದ್ದವು ಚಿಂದಿ ಚಿಂದಿಯಾಗಿದ್ದವು.'

ಆದರೆ 'ಆತ ಅದರಲ್ಲೇ ಭವ್ಯವಾಗಿ ಕಂಡುಬರುತ್ತಾನೆ' ಎಂದ ಟ್ರೆವರ್ 'ಯಾವುದಕ್ಕೂ ನಾನೇನು ಆತನನ್ನು ಫ್ರಾಕ್ ಕೋಟ್‌ನಲ್ಲಿ ಚಿತ್ರಿಸಿಲ್ಲ. ನೀನು ಯಾವುದನ್ನು ಹರಿದ ಬಟ್ಟೆಗಳೆನ್ನುತ್ತೀಯೋ ಅವು ನನಗೆ ಬೆರಗನ್ನು ಉಂಟುಮಾಡುತ್ತವೆ. ನಿನಗೆ ಯಾವುದು ದಾರಿದ್ರ್ಯವೆನ್ನಿಸುತ್ತದೆಯೋ ಅದು ನನಗೆ ಕುತೂಹಲಕಾರಿಯಾಗಿ ಕಂಡುಬರುತ್ತದೆ. ಆದರೂ ನೀನು ಆತನಿಗೆ ಕೊಡಬೇಕೆಂದಿರುವ ವಿಷಯವನ್ನು ಆತನಿಗೆ ತಿಳಿಸುತ್ತೇನೆ.'

'ಟ್ರೆವರ್, ನೀವು ಕಲಾವಿದರು ನಿಜಕ್ಕೂ ಹೃದಯಹೀನರು' ಎಂದು ಹಗಿ ಗಂಭೀರವಾಗಿ ಹೇಳಿದ.

'ಕಲೆಗಾರನ ಹೃದಯವೆನ್ನುವುದು ನಿಜಕ್ಕೂ ಆತನ ತಲೆಯೇ' ಎಂದು ಉತ್ತರಿಸಿದ ಟ್ರೆವರ್ 'ಅದರ ಜೊತೆಗೆ ನಮ್ಮ ಕೆಲಸವೆಂದರೆ ಪ್ರಪಂಚ ಹೇಗಿದೆಯೆಂದು ತಿಳಿದಿದ್ದೇವೊ ಹಾಗೇ ಅದನ್ನು ಅರಿಯುವುದೇ ಹೊರತು ನಾವು ತಿಳಿದುಕೊಂಡಂತೆ ಅದನ್ನು ಸುಧಾರಿಸುವುದಿಲ್ಲ. ಈಗ ಹೇಳು ನಿನ್ನ ಲಾರಾ ಹೇಗಿದ್ದಾಳೆ? ಆ ಮುದುಕ ಮಾಡೆಲ್ ಅವಳ ಬಗ್ಗೆ ತುಂಬಾ ಆಸಕ್ತಿ ತೋರಿಸಿದ್ದಾನೆ' ಎಂದನು.

'ಅವಳ ವಿಷಯವನ್ನೂ ನೀನು ಆತನಿಗೆ ಹೇಳಿಬಿಟ್ಟೆಯಾ?' ಎಂದ ಹಗಿ.

'ನಿಜಕ್ಕೂ ಹೇಳಿದೆ. ಆತನಿಗೆ ಕರುಣೆಯಿಲ್ಲದ ಕರ್ನಲ್ ಬಗ್ಗೆ ಈಗ ಎಲ್ಲಾ ತಿಳಿದಿದೆ. ಹಾಗೇ ಸುಂದರಿಯಾದ ಲಾರಾ ಬಗ್ಗೆ ಮತ್ತು ಹತ್ತು ಸಾವಿರ ಪೌಂಡ್ ಬಗ್ಗೆ ಕೂಡ.'

'ಆ ಭಿಕ್ಷುಕ ಮುದುಕನ ಹತ್ತಿರ ನೀನು ನನ್ನ ಖಾಸಗಿ ವಿಷಯವನ್ನೆಲ್ಲಾ ಹೇಳಿರುವೆಯಾ?' ಎಂದು ಹಗಿ ಕೂಗಿಕೊಳ್ಳುತ್ತಾ ಕೆಂಪಗೆ ಕೋಪಕ್ಕೀಡಾದನು.

'ಸ್ನೇಹಿತನೇ ಕೇಳು' ಎಂದು ಟ್ರೆವರ್ ನಗುತ್ತಾ 'ನೀನು ಯಾರನ್ನು ಭಿಕ್ಷುಕ ಮುದುಕ ಎನ್ನುತ್ತಿರುವೆಯೋ ಆತ ಯೂರೋಪ್‌ನಲ್ಲೆಲ್ಲ ಅತ್ಯಂತ ಶ್ರೀಮಂತರಲ್ಲಿ ಒಬ್ಬ. ಆತ ನಾಳೆಯೇ ಬ್ಯಾಂಕಿನಲ್ಲಿ ಒಂದಿಷ್ಟೂ ಸಾಲ ಪಡೆಯದೆ ಇಡೀ ಲಂಡನ್ ಎಲ್ಲವನ್ನೂ ಕೊಳ್ಳಬಲ್ಲವನು. ಆತ ಪ್ರತಿ ರಾಜಧಾನಿಯಲ್ಲೂ ಒಂದೊಂದು ಮನೆ ಹೊಂದಿದ್ದಾನೆ, ಬಂಗಾರದ ತಟ್ಟೆಯಲ್ಲಿ ಊಟ ಮಾಡುತ್ತಾನೆ, ಆತನಿಗೆ ಬೇಕೇ ಬೇಕು ಎಂದರೆ ರಷ್ಯಾ ಯುದ್ಧ ಮಾಡುವುದನ್ನು ಬೇಕಾದರೆ ತಪ್ಪಿಸುತ್ತಾನೆ.'

'ಏನು ನೀನು ಹೇಳುತ್ತಿರುವುದು?' ಎಂದು ಹಗಿ ಆಶ್ಚರ್ಯವ್ಯಕ್ತಪಡಿಸಿದ.

'ನಾನೇನು ಹೇಳುವುದು, ನೀನು ಇಂದು ಸ್ಟುಡಿಯೋದಲ್ಲಿ ನೋಡಿದ ವ್ಯಕ್ತಿ ಮತ್ತಾರೂ ಅಲ್ಲ, ಬ್ಯಾರನ್ ಹಾಸ್‌ಬರ್ಗ್. ಆತ ನನ್ನ ಒಳ್ಳೆಯ ಸ್ನೇಹಿತ ಹಾಗೇ ನನ್ನೆಲ್ಲಾ ಚಿತ್ರಗಳನ್ನೂ ಕೊಳ್ಳುತ್ತಾನೆ. ಅದರ ಜೊತೆಯಲ್ಲೇ ಭಿಕ್ಷುಕನಾಗಿ ಆತನನ್ನು ಚಿತ್ರೀಕರಿಸಲು ಒಂದು ತಿಂಗಳ ಕೆಳಗೆ ನನಗೊಂದು ಕೆಲಸ ನೀಡಿದ್ದಾನೆ. ಆತ ತನ್ನ ಚಿಂದಿಬಟ್ಟೆಗಳಲ್ಲಿ ಅದ್ಭುತವಾಗಿ ಕಾಣಿಸಿಕೊಂಡಿದ್ದಾನೆ. ಅಥವಾ ನನ್ನ ಚಿಂದಿಬಟ್ಟೆಗಳಲ್ಲಿ ಎಂದೂ ಹೇಳಬಹುದೇನೋ. ಏಕೆಂದರೆ ಆ ಚಿಂದಿಬಟ್ಟೆಗಳು ನಾನು ಸ್ಪೇನ್‌ನಲ್ಲಿ ಪಡೆದುಕೊಂಡ ಹಳೆಯ ಬಟ್ಟೆಗಳು' ಎಂದು ಟ್ರೆವರ್ ಹೇಳಿದನು.

'ಬ್ಯಾರನ್ ಹಾಸ್ ಬರ್ಗ್, ಅಯ್ಯೋ ದೇವರೇ, ಆತನಿಗೆ ನಾನು ಒಂದು ಸವರನ್ ಕೊಟ್ಟೆನೇ!' ಎಂದು ಹಗಿ ವಿಸ್ಮಯಗೊಳ್ಳುತ್ತಾ ಹಾಗೇ ಕುರ್ಚಿಯಲ್ಲಿ ಕುಸಿದು ಕುಳಿತನು.

'ಆತನಿಗೆ ಒಂದು ಸವರನ್ ಕೊಟ್ಟೆಯಾ!' ಎಂದು ಜೋರಾಗಿ ಕೂಗಿಕೊಂಡ ಟ್ರೆವರ್ ಬಿದ್ದು